# ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16-03-2021 ರ ನಡವಳಿಗಳು

## ವಿಷಯದ ಸಂಖ್ಯೆ: 736/2020-21

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2020-21ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3856 ರ ಅಡಿಯಲ್ಲಿ Improvements and Development and Widening of Road from National Highway to Railway Line Via Nitte Meenakshi College Road till BBMP Limits ಕಾಮಗಾರಿಯ ಅಂದಾಜು ಮೊತ್ತ ರೂ.1500.00 ಲಕ್ಷಗಳಿಗೆ ಸಂಖ್ಯೆ:001-21-000020 ರಂತೆ ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಮತ್ತು ಅನುಮೋದಿತ ದರಗಳ ದರಪಟ್ಟಿಯಂತೆ ತಯಾರಿಸಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿದ್ದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ರವರು ದಿನಾಂಕ:12-11-2020 ರಂದು ಟೆಂಡರ್ ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ:04-12-2020ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಬಿಡ್‌ದಾರರಾದ Sri.Yashwanth Gowda.H.S (SLP Infra Engineers Private Limited), Sri. S.M.Raju (S.M.Raju) & Sri. M.Ravish Kumar (M/s. B.Munikrishnappa) ರವರುಗಳು ಭಾಗವಹಿಸಿದ್ದು, ತಾಂತ್ರಿಕವಾಗಿ ಅರ್ಹರಾಗಿರುವ ಸದರಿ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲು ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ಅನುಮೋದಿಸಿರುವಂತೆ ದಿನಾಂಕ:24-12-2020ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ 2018-19ನೇ ಸಾಲಿನ ದರ ಪಟ್ಟಿಯಂತೆ (ರೂ.ಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತಕ್ಕೆ 2018-19ನೇ ಸಾಲಿನ ದರ ಪಟ್ಟಿ ಹಾಗೂ ದಿ: 01-01-2021 & 01-02-2021ರ ಮಂಜೂರಾತಿ ದರಗಳನ್ನು (Issue Rates) ಸೇರಿಸಿದಾಗ ಆಗುವ ಮೊತ್ತ (ರೂ.ಗಳಲ್ಲಿ) | ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ) | ಗುತ್ತಿಗೆದಾರರು ನಮೂದಿಸಿದ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡಾವಾರು ಪ್ರಮಾಣ | ದಿ: 01-01-2021 & 01-02-2021ರ ಮಂಜೂರಾತಿ ದರಕ್ಕೆ (Issue Rates) ಹೋಲಿಸಿದಾಗ ಶೇಕಡಾವಾರು ಪ್ರಮಾಣ | ಷರಾ |
|---|---|---|---|---|---|---|---|
| 1 | Sri.Yashwanth Gowda.H.S (SLP Infra Engineers Private Limited ) | 12,44,67,450.26 | 13,07,05,891.16 | 13,68,99,175.33 | ಶೇ.9.99% (+) ರಷ್ಟು ಹೆಚ್ಚುವರಿ | ಶೇ.4.74% (+) ರಷ್ಟು ಹೆಚ್ಚುವರಿ | L-1 |
| 2 | Sri. S.M.Raju (S.M.Raju ) | | | 13,93,97,631.00 | ಶೇ.12.00% (+) ರಷ್ಟು ಹೆಚ್ಚುವರಿ | ಶೇ.6.65% (+) ರಷ್ಟು ಹೆಚ್ಚುವರಿ | L-2 |
| 3 | Sri. M.Ravish Kumar (M/s. B.Munikrishnappa) | | | 14,31,31,379.02 | ಶೇ.15.00% (+) ರಷ್ಟು ಹೆಚ್ಚುವರಿ | ಶೇ.9.51% (+) ರಷ್ಟು ಹೆಚ್ಚುವರಿ | L-3 |

**ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.**

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ/ ಅನುದಾನಗಳಲ್ಲಿ ಕೈಗೊಂಡಿಲ್ಲದೆ ಇರುವ ಮತ್ತು ಪುನರಾವರ್ತನೆಯಾಗದೇ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.
2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯಯ/2019-20/ಪಿಆರ್/11/2018-19, ದಿನಾಂಕ:12.06.2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ಬಿಬಿಎಂಪಿ/ಆ/ಪಿಆರ್/5287/2019-20, ದಿನಾಂಕ:05.11.2019 ಮತ್ತು ಬಿಬಿಎಂಪಿ/ಪಿ/ಪಿಆರ್/6166/2019-20, ದಿನಾಂಕ:13.12.2019 ರಲ್ಲಿನ ನಿರ್ದೇಶನಗಳನ್ನು/ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.
3. ಕಾಮಗಾರಿಗೂ ಮುನ್ನ ಹಾಗೂ ನಂತರದ GPS ಯುಳ್ಳ ಛಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು.

ಮೇಲ್ಕಂಡ ವಿವರಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವ ಸಂಬಂಧ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ) ಹಾಗೂ ವಲಯ ಆಯುಕ್ತರು (ಯಲಹಂಕ) ರವರ ದಿನಾಂಕ:10-02-2021 ರ ಟಿಪ್ಪಣಿ.

1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.1500.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಅಹ್ವಾನಿಸಲಾಗಿರುವುದರಿಂದ ಘಟನ್ನೋತ್ತರ ಆಡಳಿತಾತ್ಮಕ ಅನುಮೋದನೆ.
2. ಪ್ರಸ್ತಾಪಿತ ಕಾಮಗಾರಿಯನ್ನು ಸಾರ್ವಜನಿಕರ ಸೇವಾ ಹಾಗೂ ಆರೋಗ್ಯ ಹಿತದೃಷ್ಠಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಎಲ್-01 ಗುತ್ತಿಗೆದಾರರಾದ Sri.Yashwanth Gowda.H.S (SLP Infra Engineers Private Limited) ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.13,68,99,175.33 ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಬಂದಂತಹ ಶೇ.9.99% (+) ರಷ್ಟು ಹಾಗೂ ದಿನಾಂಕ:01-01-2021 & 01-02-2021ರ ಮಂಜೂರಾತಿ ದರಕ್ಕೆ (Issue Rates) ಹೋಲಿಸಿದಾಗ ಬಂದಂತಹ ಶೇ.4.74% ರಷ್ಟು ಹೆಚ್ಚು ಟೆಂಡರ್ ಪ್ರೀಮಿಯಂಗೆ ಅನುಮೋದನೆ.

**ತೀರ್ಮಾನ :** **ವಿಶೇಷ ಆಯುಕ್ತರು (ಆಡಳಿತ) ಹಾಗೂ ವಲಯ ಆಯುಕ್ತರು (ಯಲಹಂಕ) ರವರ ದಿನಾಂಕ:10-02-2021 ರ ಟಿಪ್ಪಣಿಯನ್ನು ಒಪ್ಪುತ್ತಾ, ಟೆಂಡರ್ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.**

**(ಗೌರವ ಗುಪ್ತ)**
**ಆಡಳಿತಗಾರರು**